**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 16-09-2023.**

**ಪಾಟೀ ಸವಾಲು - ಪ್ರತಿವಾದಿಯ ಪರ ವಕೀಲರಿಂದ :**

**1)** ನಂಜಪ್ಪ ಅವರಿಗೆ ಒಟ್ಟು 5 ಜನ ಹೆಣ್ಣು ಮಕ್ಕಳು. 2 ನೇ ಪ್ರತಿವಾದಿ ನನ್ನ ಅಕ್ಕ. 9 ರಿಂದ 12 ನೇ ಪ್ರತಿವಾದಿಗಳು 2 ನೇ ಪ್ರತಿವಾದಿಯ ಮಕ್ಕಳು. ನಮ್ಮ 5 ಜನ ಹೆಣ್ಣು ಮಕ್ಕಳ ಹೊರತಾಗಿ ನಂಜಪ್ಪ ಅವರಿಗೆ ಬೇರೆ ಮಕ್ಕಳು ಇಲ್ಲ. ನನಗೆ ಈಗ 63 ವರ್ಷ ವಯಸ್ಸು. 1996 ರಲ್ಲಿ ನನ್ನ ಮದುವೆಯಾಗಿತ್ತು. ಲಕ್ಷ್ಮಮ್ಮ ಅವರಿಗೂ ಮದುವೆಯಾಗಿ ಮಕ್ಕಳು ಇದ್ದರು. ದಿ.18-07-1996 ರಲ್ಲಿ ಆದ ವಿಲ್ ನಾಮೆಯಲ್ಲಿ ನಾವು ಐದೂ ಜನ ಹೆಣ್ಣು ಮಕ್ಕಳು ಪಕ್ಷಕಾರರು ಎಂದರೆ ಸರಿ. ಸದರಿ ವಿಲ್ ನಾವೆಯಲ್ಲಿ ಐದೂ ಜನ ಹೆಣ್ಣುಮಕ್ಕಳಿಗೆ ಯಾವ ಯಾವ ಆಸ್ತಿ ಹೋಗಬೇಕು ಎಂದು ನಂಜಪ್ಪ ಅವರು ಬರೆದಿದ್ದರು. ಸದರಿ ವಿಲ್ ನಾಮೆಯ ಆಧಾರದ ಮೇಲೆ ನಂಜಪ್ಪ ಅವರು ತೀರಿಹೋದ ನಂತರ ಖಾತೆ ಬದಲಾವಣೆ ಮಾಡಲು ನಾನಾಗಲೀ ಲಕ್ಷ್ಮಮ್ಮ ಅವರಾಗಲೀ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ನನಗೆ ಕಾಡಯರಪ್ಪ ಹಳ್ಳಿಯ ಚಿಕ್ಕಮುದ್ದಯ್ಯ ಗೊತ್ತು. ಅವರು ನಮ್ಮ ತಂದೆಯ ಸ್ನೇಹಿತರು. ಅವರು ಈಗ ಜೀವಂತ ಇರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಮ್ಮ ತಂದೆ ದಿ.02-08-1998 ರಲ್ಲಿ ಮರಣ ಹೊಂದಿರುತ್ತಾರೆ. ವಿಲ್ ನಾಮೆ ಆಗುವ ಸವಯದಲ್ಲಿ ನಮ್ಮ ತಂದೆ ಮತ್ತು ಚಿಕ್ಕಮುದ್ದಯ್ಯ ಅವರು ಚೆನ್ನಾಗಿದ್ದರು ಎಂದರೆ ಸರಿ. ದಾವಾ ಐಟಂ ಸಂಖ್ಯೆ 22 ಈಗ 2 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಂಜಪ್ಪ ಅವರು ಮಾಡಿ ಇಟ್ಟ ವಿಲ್ ನಾಮೆಯ ಪ್ರಕಾರ ಭಾಗ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ಬೆಂಗಳೂರಿನಲ್ಲಿ ಮೂರು ಸೈಟುಗಳು ಮತ್ತು ದೇವನಹಳ್ಳಿಯಲ್ಲಿ ಬೇರೆ ಆಸ್ತಿಗಳು ಇದ್ದು ಅವುಗಳನ್ನು ಸೇರಿಸಿ ಐದೂ ಜನಕ್ಕೂ ವಿಭಾಗ ಮಾಡಲು ಯಾವುದೇ ತೊಂದರೆ ಇಲ್ಲ. ನಂಜಪ್ಪ ಬರೆದ ವಿಲ್ ನ ಆಧಾರದಂತೆ 2 ನೇ ಪ್ರತಿವಾದಿಯ ವಾರಸುದಾರರು ದಾವಾ

ಐಟಂ ಸಂಖ್ಯೆ 22 ರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ವಿಲ್ ನಾಮೆಯನ್ನು 4 ನೇ ಪ್ರತಿವಾದಿಯ ಕಡೆಯಿಂದ ಹಾಜರುಪಡಿಸಿರುತ್ತೇನೆ. ದಿ.09-11-1998 ರಂದು ನಂಜಪ್ಪ ಅವರ ಮಕ್ಕಳ ಮಧ್ಯೆ ವಿಭಾಗ ಪತ್ರ ಆಗಿದೆ ಎಂದರೆ ನಾವು ಐದೂ ಜನ ಅಕ್ಕ-ತಂಗಿಯರು ಸೇರಿ ಒಂದು ವಿಭಾಗ ಪತ್ರ ಮಾಡಿಕೊಂಡಿದ್ದು, ನನಗೆ ದಿನಾಂಕ ಗೊತ್ತಿಲ್ಲ. ಸದರಿ ಪತ್ರದಲ್ಲಿ ಯಾರು ಯಾರು ಯಾವ ಯಾವ ಭಾಗ ತೆಗೆದುಕೊಳ್ಳಬೇಕು ಎಂದು ಸಂಕ್ಷಿಪ್ತವಾಗಿ ಬರೆಸಿರುತ್ತೇವೆ ಎಂದರೆ ಸರಿ. ಪಂಚಾಯಿತಿದಾರರು ಮಾತನಾಡಿ ಸದರಿ ವಿಭಾಗ ಪತ್ರವನ್ನು ಮಾಡಿಸಿರುತ್ತಾರೆ ಎಂದು ಸಾಕ್ಷಿಯು ಮುಂದುವರೆದು ಹೇಳುತ್ತಾರೆ. ಸದರಿ ವಿಭಾಗ ಪತ್ರವನ್ನು ನೋಡದೇ ಯಾವ ಯಾವ ಆಸ್ತಿ ಯಾರ್ಯಾರಿಗೆ ಹೋಗಿದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಸದರಿ ಪತ್ರದಲ್ಲಿ 2 ನೇ ಪ್ರತಿವಾದಿ ಸಹ ಪಕ್ಷಕಾರರು. ಅಶ್ವತಪ್ಪ ಎಂದರೆ 1 ನೇ ಪ್ರತಿವಾದಿಯ ಗಂಡ. ಅವರು ಶಿಡ್ಲಘಟ್ಟದವರಾಗಿದ್ದು, ಈಗ ಮೈಲನಹಳ್ಳಿಯಲ್ಲಿ ವಾಸವಿರುತ್ತಾರೆ. ಅವರು ಮನೆ ಅಳಿಯನಾಗಿ ಮೈಲನಹಳ್ಳಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ಯಾರ ಯಾರ ಹೆಸರಿಗೆ ಎಷ್ಟು ಎಷ್ಟು ಹಣ ಡೆಪಾಸಿಟ್ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಅದನ್ನು ಯಾವಾಗ ಬಿಡುಗಡೆ ಮಾಡಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ನನ್ನ ಹೆಸರಿನಲ್ಲಿ ಆದ ಡೆಪಾಸಿಟ್ ಹಣವನ್ನು ನಾನು ತೆಗೆದುಕೊಂಡಿರುತ್ತೇನೆ. ಸದರಿ ಹಣ ನನ್ನ ತಂದೆ ಸ್ವಂತ ಸಂಪಾದನೆ ಮಾಡಿದ ಹಣ ಎಂದರೆ ಸರಿ. ಡೆಪಾಸಿಟ್ ಹಣವನ್ನು ಪಡೆಯುವ ಕಾಲಕ್ಕೆ ನಮ್ಮ ತಂದೆ ತೀರಿಹೋಗಿ ಬಹಳ ದಿನ ಆಗಿತ್ತು. ಉಳಿದ ಸಹೋದರಿಯರು ಡೆಪಾಸಿಟ್ ಹಣವನ್ನು ಪಡೆದುಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಬೇರೆಯವರು ಡೆಪಾಸಿಟ್ ಹಣವನ್ನು ಪಡೆದ ದಾಖಲೆಗಳನ್ನು ಹಾಜರುಪಡಿಸಿದ್ದೇನೋ ಎಂದು ನನಗೆ ನೆನಪಿಲ್ಲ. ಮೈಲನಹಳ್ಳಿಯಲ್ಲಿ ಇರುವ ದಾವಾ ಸ್ವತ್ತುಗಳಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ. 1998 ರಲ್ಲಿ ನನ್ನ ಹೆಸರಿಗೆ 37 ಸಾವಿರ ರೂಪಾಯಿ ಡೆಪಾಸಿಟ್ ಆಗಿತ್ತು. ನಂಜಪ್ಪ ಅವರ

ಬರೆದ ವಿಲ್ ನಾಮೆಯ ಅನ್ವಯ ಅವರವರು ಅವರವರ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**5 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**